**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬೆಳ್ತಂಗಡಿ.**

**ಅಪರಾಧ ಪ್ರಕರಣ ಸಂಖ್ಯೆ982/2025**

**ಚಾಸಾಃ** 1 **ಫ್ರಾಸಾಃ** 1

ಹೆಸರು : ಕುಮಾರಿ ಸುಶ್ಮಿತಾ

ತಂದೆಯ ಹೆಸರು : ಆನಂದ

ಪ್ರಾಯ : 20 ವರ್ಷ

ಉದ್ಯೋಗ : B.Sc Lab Technician, Alvas, Moodabidre

ವಾಸ : ಸ್ವಸ್ತಿಕ್ ನಗರ, ಬೆಳ್ತಂಗಡಿ ತಾಲೂಕು

**ದಿನಾಂಕ 24.12.2025 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸ. ಸ. ಅ. ರವರಿಂದಃ**

ಆರೋಪಿಯ ಪರಿಚಯ ಇರುತ್ತದೆ. ಆರೋಪಿಯು ಮನೆಯ ಹತ್ತಿರದವರಾದ ಕಾರಣ ನನಗೆ ಎಸ್.ಎಸ್.ಎಲ್.ಸಿ ಯಿಂದಲೂ ಅವರು ಪರಿಚಯ ಇರುತ್ತಾರೆ. ದಿಃ 19.3.2025 ರಂದು ನಾನು ಆಸ್ಪತ್ರೆಗೆ ತೋರಿಸುವ ಸಲುವಾಗಿ ಕಾರ್ಕಳಕ್ಕೆ ಹೋಗಿದ್ದು, ನಂತರ ಮೂಡಬಿದ್ರೆಗೆ ಬಂದು ಸಂಜೆ 4.30 ಕ್ಕೆ ಮೂಡಬಿದ್ರೆ ಬಸ್ ಸ್ಟಾಂಡ್‌ನಿಂದ ವಿಶಾಲ್ ಬಸ್ಸಿಗೆ ಹತ್ತಿದ್ದು ಆಗ ನನ್ನೊಟ್ಟಿಗೆ ಚಾಸಾ4 ರವರು ಇದ್ದರು. ನಾನು ಬಸ್ ಹತ್ತುವಾಗ ಆರೋಪಿಯು ನನ್ನನ್ನು ನೋಡಿ ಆತನು ಕೂಡ ಅದೆ ಬಸ್ಸನ್ನು ಹತ್ತಿರುತ್ತಾನೆ. ನಂತರ ಬಸ್ಸಿನಲ್ಲಿ ಪ್ರಯಾಣಿಸುವಾಗ ನನ್ನನ್ನು ಬೇವರ್ಸಿ, ರಂಡೆ ಎಲ್ಲಿಗೆ ಹೋಗಿದ್ದೆ ಎಂದು ಬಯ್ಯುತ್ತಿರುತ್ತಾನೆ. ಬಸ್ಸು ಕುರ್ಲೊಟ್ಟು ತಲುಪುವಾಗ ನನ್ನ ಕಾಲೇಜ್ ಬ್ಯಾಗನ್ನು ಆರೋಪಿಯು ಕಿತ್ತುಕೊಂಡು ಬಸ್ಸಿನಿಂದ ಕೆಳಗೆ ಇಳಿದಿರುತ್ತಾನೆ. ಆಗ ಬಸ್ಸಿನ ಕಂಡಕ್ಟರ್ ಆರೋಪಿಯನ್ನು ಕರೆದು ಆತನಿಂದ ನನ್ನ ಕಾಲೇಜು ಬ್ಯಾಗನ್ನು ಪಡೆದುಕೊಂಡು ನನಗೆ ನೀಡಿರುತ್ತಾರೆ. ನಂತರ ಅದೇ ಬಸ್ಸಿನಲ್ಲಿ ಮುಂದೆ ಪ್ರಯಾಣಿಸಿ ಪಡ್ಡಂದಡ್ಕ ಎಂಬಲ್ಲಿ ನಾನು ಮತ್ತು ನನ್ನ ಸ್ನೇಹಿತೆ ಚಾಸಾ4 ರವರು ಕೆಳಗೆ ಇಳಿದಿರುತ್ತೇವೆ. ನಂತರ ನಾನು ನನ್ನ ತಂದೆಯಾದ ಚಾಸಾ6 ರವರಿಗೆ ಕರೆ ಮಾಡಿದ್ದು ನಂತರ ನನ್ನ ತಂದೆಯವರು ನಾನು ಇದ್ದಲ್ಲಿಗೆ ಬಂದು ನಾವು ಇಬ್ಬರು ವೇಣೂರು ಪೊಲೀಸ್ ಠಾಣೆಗೆ ಹೋಗಿ ಆರೋಪಿಯ ವಿರುದ್ಧ ದೂರು ನೀಡಿರುತ್ತೇವೆ. ಸದರಿ ದೂರಿನಲ್ಲಿ ಸಾಕ್ಷಿಯು ತನ್ನ ಸಹಿಯನ್ನು ನೋಡಿ

ಗುರುತಿಸಿದ್ದು ಸದರಿ ದೂರನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ನಂತರ ದಿಃ 21.3.2025 ರಂದು ನಾನು ತೋರಿಸಿಕೊಟ್ಟಂತೆ ತಕ್ಷೀರು ನಡೆದ ವಿಶಾಲ್ ಬಸ್ಸು ಕುರ್ಲೋಟ್ಟು ಎಂಬಲ್ಲಿ ರಸ್ತೆ ಬದಿ ನಿಂತಿದ್ದು ಅಲ್ಲಿ ಚಾಸಾ8 ಮತ್ತು 9 ರವರ ಸಮಕ್ಷಮ ಸಂಜೆ 5.30 ರಿಂದ 6.30 ಗಂಟೆಯವರೆಗೆ ತಕ್ಷೀರು ಸ್ಥಳ ಮಹಜರ್ ಜರುಗಿಸಿರುತ್ತಾರೆ. ಸದರಿ ಮಹಜರ್ ನಲ್ಲಿ ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಮಹಜರ್ ನ್ನು ನಿಪಿ-2 ಎಂದು ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ನಂತರ ನಾನು ಮಾನ್ಯ ನ್ಯಾಯಾಧೀಶರ ಮುಂದೆ ಆರೋಪಿಯ ಕೃತ್ಯದ ಬಗ್ಗೆ ಹೇಳಿಕೆ ನೀಡಿರುತ್ತೇನೆ. ಸದರಿ ಹೇಳಿಕೆಯಲ್ಲಿ ಸಾಕ್ಷಿ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು ಸದರಿ ಹೇಳಿಕೆಯನ್ನು ನಿಪಿ-3 ಎಂದು ಸಾಕ್ಷಿಯ ಸಹಿಗಳನ್ನು ನಿಪಿ-3(ಎ) ಮತ್ತು (ಬಿ) ಎಂದು ಗುರುತಿಸಲಾಯಿತು.

ನಂತರ ದಿಃ 28.3.2025 ರಂದು ವೇಣೂರು ಪೊಲೀಸರು ನನ್ನನ್ನು ಠಾಣೆಗೆ ಕರೆಸಿ ನಾನು ಹಾಜರುಪಡಿಸಿದ ನನ್ನ ಕಾಲೇಜು ಬ್ಯಾಗನ್ನು ಚಾಸಾ10 ಮತ್ತು 11 ರವರ ಸಮಕ್ಷಮ ಸಂಜೆ 5.30 ರಿಂದ 5.45 ಗಂಟೆಯವರೆಗೆ ಸ್ವತ್ತು ಸ್ವಾಧೀನ ಮಹಜರ್ ಜರುಗಿಸಿ ನನ್ನ ಬ್ಯಾಗನ್ನು ಸ್ವಾಧೀನಪಡಿಸಿಕೊಂಡಿರುತ್ತಾರೆ. ಸದರಿ ದಾಖಲೆಯಲ್ಲಿ ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯನ್ನು ನಿಪಿ-4 ಎಂದು ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ನಾನು ಈ ಬಗ್ಗೆ ಪೊಲೀಸರಿಗೆ ಮರುಹೇಳಿಕೆ ನೀಡಿರುತ್ತೇನೆ. ಆರೋಪಿಯನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯು ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

(ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಸದರಿ ಕೋರಿಕೆಯನ್ನು ತಳ್ಳಿಹಾಕಿ ಸೂಕ್ತ ಕಾರಣಗಳು ಇಲ್ಲದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು)

**ಮರುವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ. ದ. ನ್ಯಾ ದಂ.ಗಳು ಬೆಳ್ತಂಗಡಿ.

(ಸಾ. ಓ. ಹೇ. ಕೇ. ಸ. ಇ. ಎ. ಒ.)